# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1028
ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 19-12-2018
ಉತ್ತರಿಸುವವರು : ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

*****

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಶಾಸನ ಬದ್ಧ ಅರಣ್ಯ (Statutory Forest) ಪದದ ವ್ಯಾಖ್ಯಾನವೇನು;ರಾಜ್ಯದಲ್ಲಿ ಶಾಸನಬದ್ಧ ಅರಣ್ಯದ ವಿಸ್ತೀರ್ಣ ವೆಷ್ಟು; (ಜಿಲ್ಲಾವಾರು, ಹೆಕ್ಟೇರ್‌ವಾರು ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 185 ಎಫ್‌ಎಫ್ 2011, ದಿನಾಂಕ: 15.05.2014ರ ಆದೇಶದನುಸಾರ ಶಾಸನ ಬದ್ಧ ಅರಣ್ಯ (Statutory Forest) ಪದದ ವ್ಯಾಖ್ಯಾನವನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿರುತ್ತದೆ.<br>"ಕರ್ನಾಟಕ ಅರಣ್ಯ ಕಾಯ್ದೆ, 1963ರ ಸೆಕ್ಷನ್(4), (17), (33) (35) ಹಾಗೂ ಅಧ್ಯಾಯ (II) (III) (IV) ರಲ್ಲಿ ಸಮೂದಿಸಿರುವ ಜಮೀನುಗಳು, ಉತ್ತರಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ, ಕುಂಕಿ, ಬಾಣೆ ಮತ್ತು ಕಾಣೆ ಜಮೀನುಗಳನ್ನು ಮತ್ತು ಮೈಸೂರು ಭಾಗದಲ್ಲಿನ ಸೊಪ್ಪಿನಬೆಟ್ಟ ಜಮೀನುಗಳನ್ನು, ಕೊಡಗು ಜಿಲ್ಲೆಯಲ್ಲಿನ ಜಮ್ಮಾ ಮತ್ತು ಬಾಣೆ ಜಮೀನುಗಳನ್ನು ಕರ್ನಾಟಕ ಕಂದಾಯ ಜಮೀನುಗಳ ಕಾಯ್ದೆ, 1964 ರ ಸೆಕ್ಷನ್ 79(2) ರನ್ನು ಸೆಕ್ಷನ್ 94-ಬಿ(3) ರೊಂದಿಗೆ ಓದಿಕೊಳ್ಳುವಂತೆ, ಕೂರ್ಗ್ ಲ್ಯಾಂಡ್ ಅಂಡ್ ರೆವೆನ್ಯೂ ರೆಗ್ಯೂಲೇಷನ್, 1899 ರ ಸೆಕ್ಷನ್ 143(1)(ಎಫ್) ರನ್ವಯ ಅರಣ್ಯ ಪೈಸಾರಿ ಜಮೀನುಗಳನ್ನು, ಕರ್ನಾಟಕ ಲ್ಯಾಂಡ್ ರೆವೆನ್ಯೂ ಕಾಯ್ದೆ, 1964 ರ ಸೆಕ್ಷನ್ 71 ರಡಿ ಬರುವ ಫಾರೆಸ್ಟ್ ರಿಸರ್ವ್ ಜಮೀನುಗಳನ್ನು ಹಾಗೂ ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಕಾಯ್ದೆ, 1961 ರ ಸೆಕ್ಷನ್ 77(3) ರಡಿ ಬರುವ ಯಾವುದೇ ಮೀಸಲು ಜಮೀನುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿರುವ ಜಮೀನುಗಳನ್ನು ಶಾಸನಬದ್ಧ ಅರಣ್ಯಗಳೆನ್ನಲಾಗುತ್ತದೆ".<br>ರಾಜ್ಯದಶಾಸನಬದ್ಧ ಅರಣ್ಯ ಪ್ರದೇಶದ ವಿಸ್ತೀರ್ಣ 3502628.60 ಹೆಕ್ಟೇರ್ ಇರುತ್ತದೆ. ಜಿಲ್ಲಾವಾರು ಹಾಗೂ ಹೆಕ್ಟರ್‌ವಾರು ವಿವರವನ್ನು **ಅನುಬಂಧ-1ರಲ್ಲಿ** ಒದಗಿಸಿದೆ. |
| ಆ) | ಉಡುಪಿ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಡೀಮ್ಡ್ ಫಾರೆಸ್ಟ್ ಪಟ್ಟಿಯಿಂದ ವಿರಹಿತ ಪಡಿಸಲಾದ ಭೂಮಿಯ ವಿಸ್ತೀರ್ಣವೆಷ್ಟು; (ಗ್ರಾಮವಾರು. ಸ.ನಂ.ವಾರು. ವಿಸ್ತೀರ್ಣವಾರು ವಿವರ ನೀಡುವುದು) | ಉಡುಪಿ ಜಿಲ್ಲೆಯಲ್ಲಿ ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿದ 34918.20 ಹೆ. ಪ್ರದೇಶವನ್ನು ಕೈ ಬಿಡಲು ಉಡುಪಿ ಜಿಲ್ಲಾ ಡೀಮ್ಡ್ ಫಾರೆಸ್ಟ್ ಪರಿಶೀಲನಾ ಸಮಿತಿಯಿಂದ ವರದಿ ಸಲ್ಲಿಸಲಾಗಿರುತ್ತದೆ. ಸದರಿ ವರದಿಯಲ್ಲಿನ ಗ್ರಾಮವಾರು, ಸರ್ವೆ ನಂಬರ್‌ವಾರು ಇರುವ 318 ಪುಟವುಳ್ಳ ವಿವರವನ್ನು **ಅನುಬಂಧ-2ನ್ನು** [illegible] ಯಲ್ಲಿ ಒದಗಿಸಿದೆ. |
| ಇ) | ನೈಜ ಕೃಷಿ ಹೊಲ ಗದ್ದೆ ತೋಟ ಮನೆ ಹಟ್ಟಿ ಅಂಗಳಗಳು ಕೂಡ ಡೀಮ್ಡ್ ಪಟ್ಟಿಯಲ್ಲಿದೆಯೇ; ಈ ಲೋಪವನ್ನು ಸರಿಪಡಿಸಲು ಸರ್ಕಾರದ ಕ್ರಮವೇನು? | ನೈಜ ಕೃಷಿ ಹೊಲ ಗದ್ದೆ ತೋಟ ಮನೆ ಹಟ್ಟಿ ಅಂಗಳಗಳು ಡೀಮ್ಡ್ ಫಾರೆಸ್ಟ್ ಪಟ್ಟಿಯಲ್ಲಿರುವುದಿಲ್ಲ. ಹೀಗಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಅಪಜೀ 176 ಎಫ್‌ಎಫ್ 2018

(ಆರ್.ಶಂಕರ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು